ಜಿಲ್ಲಾ ಪರಿಷತ್ ವಶದಲ್ಲಿರುವ ರಸ್ತೆಗಳು ಮತ್ತು ಕೆರೆಗಳು

೮೦೫ ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಜಿಲ್ಲಾ ಪರಿಷತ್ ವಶದಲ್ಲಿರುವ ರಸ್ತೆಗಳು ಮತ್ತು ಕೆರೆಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡುವ ಬಗ್ಗೆ ಸರ್ಕಾರವು ಆಲೋಚಿಸಿದೆಯೇ ?

ಆ) ಯೋಚಿಸಿದ್ದಲ್ಲಿ, ಇದನ್ನು ಯಾವಾಗ ಕಾರ್ಯಗತ ಮಾಡಲಾಗುವುದು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಭಾರತ ಜರ್ಮನಿ ದ್ವಿಪಕ್ಷೀಯ ಯೋಜನೆ ಬಗ್ಗೆ.

೬೩೦ ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಾರತ-ಜರ್ಮನಿ (ಇಂಡೋ ಎಫ್‌ಆರ್‌ಜಿ) ದ್ವಿ ಪಕ್ಷೀಯ ನೆರವಿನ (ಬೈಲಾಟರಲ್ ಅಸಿಸ್ಟೆಡ್) ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯದ ಯೋಜನೆಯಲ್ಲಿ ಯಾವ ಯಾವ ಜಿಲ್ಲೆಗಳನ್ನು ಸೇರಿಸಲು ಯೋಜಿಸಲಾಗಿದೆ ?

ಆ) ಈ ಯೋಜನೆಯಲ್ಲಿ ತುಮಕೂರು ಜಿಲ್ಲೆಯನ್ನು ಸೇರಿಸಲಾಗಿದೆಯೇ ?

ಇ) ಈ ಯೋಜನೆಯ ನೆರವಿನ ಮೊತ್ತ ಸ್ವರೂಪ ಮತ್ತು ಅವಧಿ ಎಷ್ಟು ?

ಈ) ಈ ಯೋಜನೆಯನ್ನು ತ್ವರಿತವಾಗಿ ಪ್ರಾರಂಭಿಸಲು ಭಾರತ-ಜರ್ಮನಿ ದೇಶಗಳ ನಡುವೆ ಒಪ್ಪಂದ ಆಗಂಪಂತೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು).—

ಅ) ತುಮಕೂರು, ಹಾಸನ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಸೇರಿಸಲು ಯೋಜಿಸಲಾಗಿದೆ.

ಆ) ಹೌದು.

ಇ) ರೂಪರೇಖೆಯ ಯೋಜನೆಯ ಒಟ್ಟು ಅಂದಾಜು ೨೭.೭೦ ಕೋಟಿ ರೂ.ಗಳಿಗೆ ತಯಾರಿಸಲಾಗಿದೆ. ಕರ್ನಾಟಕ ಸರ್ಕಾರ ಮತ್ತು ಜರ್ಮನಿ ಭರಿಸಬಹುದಾದ ವೆಚ್ಚ ಈ ರೀತಿ ಇದೆ.

ಕರ್ನಾಟಕ ಸರ್ಕಾರ

ಅಂದಾಜು ವೆಚ್ಚದ ಶೇಕಡ ೧೦ ರಷ್ಟು,	—	೨.೭೭ ಕೋಟಿ ರೂ.ಗಳು.
ಜರ್ಮನಿ :		
ಅಂದಾಜು ವೆಚ್ಚದ ಶೇಕಡ ೯೦ ರಷ್ಟು,	—	೨೪.೯೩ ಕೋಟಿ ರೂ.ಗಳು
ಮೊತ್ತ		೨೭.೭೦ ಕೋಟಿ ರೂ.ಗಳು

೫ ವರ್ಷಗಳ ಅವಧಿಯಲ್ಲಿ ಯೋಜನೆಯನ್ನು ಕಾರ್ಯಗತ ಮಾಡುವ ಉದ್ದೇಶವಿದೆ.